**MKAN N(P) 01**

**ಪ್ರಥಮ ಎಂ.ಎ. ಪರೀಕ್ಷೆ, ಜನವರಿ/ಫೆಬ್ರವರಿ 2021**

# SLM Scheme

## ಕನ್ನಡ

## ಪತ್ರಿಕೆ–1: ಆಧುನಿಕ ಕನ್ನಡ ಸಾಹಿತ್ಯ: ಒಂದು ಪ್ರಕಾರ–ಕಾವ್ಯ

**ಸಮಯ: 3 ಗಂಟೆಗಳು** **ಗರಿಷ್ಠಾಂಕ: 80**

**ಸೂಚನೆ: ಎಲ್ಲಾ ವಿಭಾಗಗಳಿಗೂ ಉತ್ತರಿಸಿ**

### ವಿಭಾಗ–ಎ

**ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ:** **(1 X 5= 5)**

1. ಹೊಟ್ಟೆಯ ಪಾಡಿಗೆ ಕಾವಿಯನುಟ್ಟು
ಬಡವರ ಹಸಿವೆಗೆ ಮೌಢ್ಯವ ಕೊಟ್ಟು
ಸುಖ ಸಂಪತ್ತನು ಕೊಂಡವರು
ಮೃಷ್ಠಾನ್ನವನೇ ಉಂಡವರು
ಗುರುಗಳು, ಶಿಷ್ಯರು, ಮನೆಗಳು, ಮಠಗಳು,
ಎಲ್ಲರು ಬೆಂದರು ಬಡಬಾಗ್ನಿಯಲಿ
ಬಡವರ ಬಗ್ಗರ ಜಠರಾಗ್ನಿಯಲಿ
ಬಡವರ ಜಠರಾಗ್ನಿಯೆ ಬಡಬಾಗ್ನಿ
ಬಡವನೆ ಕಲಿಯುಗದಂತ್ಯದ ಕಲ್ಕಿ!

2. ಕೋಲು ಸಖೀ, ಚಂದ್ರಮುಖೀ ಕೋಲೇ ನಾದಲೀಲೆ
ಮುಂಜಾವದ ಎಲರ ಮೂಸಿ ನೋಡುತಿಹವೆ ನಲ್ಲೆ
ತರಳ ಎರಳೆ, ಚಿಗುರ ಚಿಗರೆ, ಹೂವು ಹೂವು ಹುಲ್ಲೆ
ಕಂಗೊಳಿಸುವ ಕೆಂಪು ಮುಂದೆ, ಕಂಗೆಡಿಸುವ ಮಂಜು ಹಿಂದೆ
ಅತ್ತಣಿಂದ ಬೇಟೆಗಾರ ಬರುವ ನಾನು ಬಲ್ಲೆ,
ಮುಂಜಾವದ ಎಲರ ಮೂಸಿ ನೋಡುತಿಹವೆ ನಲ್ಲೆ

ಪು.ತಿ.ನೋ.

**ಮೂರು ವಿಷಯಗಳಿಗೆ ಟಿಪ್ಪಣಿ ಬರೆಯಿರಿ:** **(3 X 5=15)**

3. ಬೇಂದ್ರೆಯವರ ಕಾವ್ಯದ ಮೇಲೆ ಜಾನಪದದ ಪ್ರಭಾವ

4. ನವ್ಯಕಾವ್ಯದ ಸ್ವರೂಪ

5. ಅಡಿಗರ ಸಾಮಾಜಿಕ ಚಿಂತನೆಯ ಕವನಗಳು

6. 'ನೀರು ಲೋಹದ ಚಿಂತೆ' ಸಂಕುಲದಲ್ಲಿನ ಗಂಡು–ಹೆಣ್ಣಿನ ಸಂಬಂಧದ ಸ್ವರೂಪ

7) ಕುವೆಂಪು

## ವಿಭಾಗ–ಬಿ

**ಮೂರು ಪ್ರಶ್ನೆಗಳಿಗೆ ಉತ್ತರಿಸಿ:** **(3 X 10=30)**

8. ಅಡಿಗರ ಕಾವ್ಯದಲ್ಲಿನ ವಿಡಂಬನೆಯ ಸ್ವರೂಪವನ್ನು ವಿಶದಪಡಿಸಿ.

9. 'ಸಾವಿರಾರು ನದಿಗಳು' ಸಂಕಲನದ ಕವನಗಳ ಮುಖ್ಯ ಆಶಯಗಳನ್ನು ಕುರಿತು ಚರ್ಚಿಸಿ.

10. 'ಪಕ್ಷಿಕಾಶಿ' ಸಂಕಲನದಲ್ಲಿನ ಕವನಗಳ ವಸ್ತು ಹಾಗೂ ಶೈಲಿಯನ್ನು ಕುರಿತು ಸೋದಾಹರಣವಾಗಿ ವಿವರಿಸಿ.

11. ಬೇಂದ್ರೆಯವರ ಆಧ್ಯಾತ್ಮಿಕ ಗೀತೆಗಳನ್ನು ಪರಿಚಯಿಸಿ.

12. 'ನೀರು ಲೋಹದ ಚಿಂತೆ' ಕವನಸಂಕಲನದ ಕವಿತೆಗಳನ್ನು ಸ್ತ್ರೀವಾದಿ ನೆಲೆಯಲ್ಲಿ ವಿಶ್ಲೇಶಿಸಿ.

**ಪು.ತಿ.ನೋ.**

## ವಿಭಾಗ–ಸಿ

**ಒಂದು ಪ್ರಶ್ನೆಗೆ ಉತ್ತರಿಸಿ:** **(1 X 5=15)**

13. ನವೋದಯ ಕಾವ್ಯದ ಸ್ವರೂಪ, ಪ್ರೇರಣೆ, ಪ್ರಭಾವಗಳನ್ನು ವಿವರಿಸಿ.

14. ದಲಿತ–ಬಂಡಾಯ ಕಾವ್ಯದ ಸ್ವರೂಪವನ್ನು ಪರಿಚಯಿಸಿ.

**ಒಂದು ಪ್ರಶ್ನೆಗೆ ಉತ್ತರಿಸಿ:** **(1 X 5=15)**

15. 'ತೆರೆದ ಬಾಗಿಲು' ಕವನ ಸಂಕಲನದ ವಸ್ತು ಹಾಗೂ ಆಶಯಗಳನ್ನು ಕುರಿತು ವಿವರಿಸಿ.

16. 'ಕಟ್ಟುವೆವು ನಾವು' ಕವನ ಸಂಕಲನದ ಆಶಯಗಳನ್ನು ಪರಿಚಯಿಸಿ.

---

# MKAN N(P) 02

**ಪ್ರಥಮ ಎಂ.ಎ. ಪರೀಕ್ಷೆ, ಜನವರಿ/ಫೆಬ್ರವರಿ 2021**

**SLM Scheme**

**ಕನ್ನಡ**

**ಪತ್ರಿಕೆ–2 : ಮಧ್ಯಕಾಲೀನ ಕನ್ನಡ ಸಾಹಿತ್ಯ**

**ಸಮಯ: 3 ಗಂಟೆಗಳು** **ಗರಿಷ್ಠಾಂಕ: 80**

**ಸೂಚನೆ: ಎಲ್ಲಾ ವಿಭಾಗಗಳಿಗೂ ಉತ್ತರಿಸಿ**

**ವಿಭಾಗ–ಎ**

**ಒಂದು ಪದ್ಯಕ್ಕೆ ಭಾವಾರ್ಥ ಬರೆಯಿರಿ:** **(1 X 5= 5)**

1. ಬಸುರೊಳಗೆ ಬ್ರಹ್ಮಾಂಡಕೋಟಿಯ
ಮುಸುಕಿಕೊಂಡಿಹ ನಾ ಸಹಿತ ಮೇ
ಲಡಸೆವ ಸಿಂಧದ ಹನುಮಸಹಿತೀ ದಿವ್ಯಹಯಸಹಿತ
ಎಸುಗೆಯಲಿ ತೊಲಗಿಸುವ ಕರ್ಣನ
ಅಸಮಸಾಹಸ ಪಿರಿದೊ ಹುಲುರಥ
ದೆಸುಗೆ ನಿನ್ನಗ್ಗಳಿಕೆ ಪಿರಿದೋ ಪಾರ್ಥಹೇಳೆಂದ

2. ಕುರಿಕೋಣಗಳ ತಲೆ ಚೆಂಡನಾಡಿ
ಪ್ರಾಣಿ ಹತ್ಯವ ಮಾಳ್ಪುದಾವ ಸತ್ಕರ್ಮವೊ
ಖಂಡಕೊಯ್ದು ಕೊಡಬೇಡ ದಳ್ಳುರಿಯಗ್ನಿ
ಕೊಂಡವನು ಹೊಕ್ಕು ಹೊರಡುವುದುಚಿತವೆ?
ಚುಚ್ಚಿಕೊಳ್ಳದಿರಿ ಬೆನ್ನಲಿ ಸಿಡಿಯನು
ಕಟ್ಟಿ ತೂಗಿಸಿಕೊಳ್ಳದಿರಿ ಕರಟಕದಂತೆ

**ಪು.ತಿ.ನೋ.**

**ಮೂರು ವಿಷಯಗಳಿಗೆ ಟಿಪ್ಪಣಿ ಬರೆಯಿರಿ:** **(3 X 5=15)**

3) ಅಕ್ಕನ ವಚನಗಳಲ್ಲಿ ಪ್ರಕೃತಿ

4) ಹರಿಹರ

5) ದುಷ್ಟಬುದ್ಧಿ

6) ಕನಕದಾಸರು

7) ರತ್ನಾಕರವರ್ಣಿಯ ಬಾಹುಬಲಿ

## ವಿಭಾಗ–ಬಿ

**ಮೂರು ಪ್ರಶ್ನೆಗಳಿಗೆ ಉತ್ತರಿಸಿ:** **(3 X 10=30)**

8. ನಂಬಿಯಣ್ಣನ ಪಾತ್ರವನ್ನು ಪರಿಚಯಿಸಿ.

9. ಸಿದ್ಧರಾಮ ಚಾರಿತ್ರ್ಯದ ಪವಾಡಗಳನ್ನು ಚರ್ಚಿಸಿ.

10. ಚಂದ್ರಹಾಸನ ಕಥೆಯಲ್ಲಿ ಪ್ರತಿಪಾದಿತವಾಗಿರುವ ಹರಿಭಕ್ತಿಯ ರೀತಿಯನ್ನು ವಿವೇಚಿಸಿ.

11. ಕರ್ಣಾರ್ಜುನರ ಕಾಳಗದ ಸ್ವಾರಸ್ಯವನ್ನು ವಿವರಿಸಿ.

12. 'ಸಮಾನ ಕಥಾವಸ್ತುವಿದ್ದರೂ ರತ್ನಾಕರ ಪಂಪನಿಗಿಂತ ಭಿನ್ನ– ನಿರೂಪಿಸಿ.

## ವಿಭಾಗ–ಸಿ

**ಒಂದು ಪ್ರಶ್ನೆಗೆ ಉತ್ತರಿಸಿ:** **(1 X 5=15)**

13. ಮಧ್ಯಕಾಲೀನ ಕನ್ನಡ ಸಾಹಿತ್ಯದ ವೈಶಿಷ್ಟ್ಯಗಳನ್ನು ವಿವರಿಸಿ.

14. ಮಧ್ಯಕಾಲೀನ ಕನ್ನಡ ಸಾಹಿತ್ಯದ ಪ್ರಕಾರಗಳನ್ನುವಿವರಿಸಿ.

**ಪು.ತಿ.ನೋ.**

**ಒಂದು ಪ್ರಶ್ನೆಗೆ ಉತ್ತರಿಸಿ:** **(1 X 5=15)**

15. ಅಕ್ಕಮಹಾದೇವಿಯ ವಚನಗಳಲ್ಲಿ ಕಂಡುಬರುವ ಸಾಮಾಜಿಕ ಚಿಂತನೆಗಳನ್ನು ವಿಶ್ಲೇಷಿಸಿ.

16. ಕನಕದಾಸರ ಕೀರ್ತನೆಗಳಲ್ಲಿನ 'ಸಾಮಾಜಿಕ ಪ್ರಜ್ಞೆ'ಯನ್ನು ಕುರಿತು ಬರೆಯಿರಿ.

----

**ಪ್ರಥಮ ಎಂ.ಎ. ಪರೀಕ್ಷೆ, ಜನವರಿ/ಫೆಬ್ರವರಿ 2021**

## SLM Scheme

**ಕನ್ನಡ**

**ಪತ್ರಿಕೆ–3: ಛಂದಸ್ಸು ಮತ್ತು ದ್ರಾವಿಡ ಭಾಷಾವಿಜ್ಞಾನ ಪರಿಚಯ**

**ಸಮಯ: 3 ಗಂಟೆಗಳು** **ಗರಿಷ್ಠಾಂಕ: 80**

**ಸೂಚನೆ: ಎಲ್ಲಾ ವಿಭಾಗಗಳಿಗೂ ಉತ್ತರಿಸಿ**

**ವಿಭಾಗ–ಎ**

**ಒಂದು ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಂಗಡನೆ ಮಾಡಿ ಛಂದಸ್ಸಿನ ಹೆಸರು ತಿಳಿಸಿ.** **(1 X 5= 5)**

1. ನೆತ್ತಮನಾಡಿಭಾನುಮತಿಸೋಲ್ತೊಡೆಸೋಲಮನೀವುದೆಂದು ಕಾ
2. ನಿಂದಲ್ಲಿ ನಿಂದಪೆಂ ನಡೆದಲ್ಲಿ ನಡೆದಪೆಂ
   ಬಂದಲ್ಲಿ ಬಂದಪೆಂ ನುಡಿದಲ್ಲಿ ನುಡಿದಪೆಂ

**ಎರಡು ವಿಷಯಗಳಿಗೆ ಟಿಪ್ಪಣಿ ಬರೆಯಿರಿ:** **(2 X 5=10)**

3) ಪ್ರಾಸ

4) ರಗಳೆ

5) ಕಂದಪದ್ಯದ ಲಕ್ಷಣ

6) ಪ್ಲುತ

**ವಿಭಾಗ–ಬಿ**

**ಎರಡು ಪ್ರಶ್ನೆಗಳಿಗೆ ಉತ್ತರಿಸಿ:** **(2 X 15=30)**

7. ಛಂದಸ್ಸು ಎಂದರೇನು? ಕಾವ್ಯ ಸೌಂದರ್ಯ ವರ್ಧನೆಯಲ್ಲಿ ಅದು ವಹಿಸುವ ಪಾತ್ರವನ್ನು ಕುರಿತು ವಿವೇಚಿಸಿ.

8. ಖ್ಯಾತ ಕರ್ಣಾಟಕ ವೃತ್ತಗಳ ಲಕ್ಷಣವನ್ನು ಉದಾಹರಣೆಗಳೊಂದಿಗೆ ವಿವರಿಸಿ.

**ಪು.ತಿ.ನೋ.**

9. ಷಟ್ಪದಿಯ ಸ್ವರೂಪ ಮತ್ತು ಇತಿಹಾಸವನ್ನು

10. ಅನಾಗತ, ಗಣಪರಿವೃತ್ತಿ, ಪದ್ಮಗಣ ಮತ್ತು ಮುಡಿ–ಇವುಗಳನ್ನು ಕುರಿತು ವಿವೇಚಿಸಿ.

## ವಿಭಾಗ–ಸಿ

## ದ್ರಾವಿಡ ಭಾಷಾ ವಿಜ್ಞಾನ

**ಎರಡು ಪ್ರಶ್ನೆಗೆ ಉತ್ತರಿಸಿ:** **(2 X 10=20)**

11. ದ್ರಾವಿಡ ಜನಾಂಗದ ಇತಿಹಾಸವನ್ನು ಕುರಿತು ಬರೆಯಿರಿ.

12. ದ್ರಾವಿಡ ಭಾಷೆಗಳು ವರ್ಗೀಕರಣವನ್ನು ಕುರಿತು ಬರೆಯಿರಿ.

13. ವಿಭಕ್ತಿಪ್ರತ್ಯಯ ಎಂದರೇನು? ಅವುಗಳ ಪ್ರಸ್ತುತತೆ ಕುರಿತ ಚರ್ಚೆಯನ್ನು ಸಂಗ್ರಹಿಸಿ ಬರೆಯಿರಿ.

14. ದ್ರಾವಿಡ ಭಾಷೆಗಳಲ್ಲಿನ ಲಿಂಗ ವ್ಯವಸ್ಥೆಯನ್ನು ವಿವೇಚಿಸಿ.

**ಒಂದನ್ನು ಕುರಿತು ಟಿಪ್ಪಣಿ ಬರೆಯಿರಿ:** **(1 X 5=5)**

15. 'ಚ್' ಕಾರ ಚರಿತ್ರೆ

16. ಗುಣವಾಚಕಗಳು

17. ದ್ರಾವಿಡ ಭಾಷೆಗಳಲ್ಲಿ ವಚನ ವ್ಯವಸ್ಥೆ

**18. ಐದು ಪದಗಳಿಗೆ ಭಾಷಾ ವಿಜ್ಞಾನದ ದೃಷ್ಟಿಯಿಂದ ಟಿಪ್ಪಣಿ ಬರೆಯಿರಿ.** **(5 X 2=10)**

ಆಕಾಶವಾಣಿ, ಕಬ್ಬಿಣ, ಕಾಗದ, ಪೀತಾಂಬರ, ಮಂಗಳಾರತಿ, ಅಮ್ಮ, ಬೆಂಕಿಪೊಟ್ಟಣ, ಮೈಸೂರ್ ಪಾಕ್, ಪೆದ್ದ, ಸೀಮೆಸುಣ್ಣ.

---

**MKAN N(P) 04**

**ಪ್ರಥಮ ಎಂ.ಎ. ಪರೀಕ್ಷೆ, ಜನವರಿ/ಫೆಬ್ರವರಿ 2021**

# SLM Scheme

**ಕನ್ನಡ**

**ಪತ್ರಿಕೆ–4: ಕನ್ನಡ ಸಾಹಿತ್ಯದ ಹಿನ್ನಲೆ, ಪ್ರೇರಣೆ ಮತ್ತು ಪ್ರಭಾವ**

**ಸಮಯ: 3 ಗಂಟೆಗಳು** **ಗರಿಷ್ಠಾಂಕ: 80**

**ಸೂಚನೆ: ಎಲ್ಲಾ ವಿಭಾಗಗಳಿಗೂ ಉತ್ತರಿಸಿ**

## ವಿಭಾಗ–ಎ

**ನಾಲ್ಕು ವಿಷಯಗಳಿಗೆ ಟಿಪ್ಪಣಿ ಬರೆಯಿರಿ:** **(4 X 5=20)**

1. ಕವಿರಾಜಮಾರ್ಗ
2. ಕನ್ನಡ ಸಾಹಿತ್ಯ ಮತ್ತು ಬೌದ್ಧಧರ್ಮ
3. ರಾಮಧಾನ್ಯ ಚರಿತ್ರೆ
4. ಇಂಗ್ಲಿಷ್ ಗೀತಗಳು
5. ಮಾರ್ಕ್ಸ್‌ವಾದ ಮತ್ತು ಕನ್ನಡ ಸಾಹಿತ್ಯ
6. ಕನ್ನಡ ನಾಡುನುಡಿಯ ಏಕೀಕರಣ

## ವಿಭಾಗ–ಬಿ

**ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ:** **(3 X 10=30)**

7. ಭೂಗೋಲಿಕ ಮತ್ತು ಸಾಮಾಜಿಕ ಹಿನ್ನೆಲೆಯಲ್ಲಿ ಮೂಡಿಬಂದಿರುವ ಕನ್ನಡ ಸಾಹಿತ್ಯ ಸ್ವರೂಪವನ್ನು ವಿವೇಚಿಸಿ.
8. ಪ್ರಾಚೀನ ಕನ್ನಡ ಕಾವ್ಯದ ಮೇಲೆ ಜೈನಧರ್ಮದ ಪ್ರಭಾವವೇನು ವಿಶದಪಡಿಸಿ.
9. "ಕನ್ನಡ ಸಾಹಿತ್ಯಕ್ಕೆ ಸಂಸ್ಕೃತ ಸಾಹಿತ್ಯವೇ ಪ್ರೇರಕ, ಪೋಷಕ ಮತ್ತು ಗುರು" – ವಿವೇಚಿಸಿ
10. ಕರ್ನಾಟಕದ ರಾಜಮನೆತನಗಳು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ನೀಡಿದ ಪ್ರೇರಣೆ ಮತ್ತು ಪ್ರಭಾವಗಳನ್ನು ವಿವರಿಸಿ.
11. ಕನ್ನಡ ಸಾಹಿತ್ಯದ ದಿಕ್ಕನ್ನು ಬದಲಿಸಲು ಕಾರಣವಾದ ವಚನಕಾರರ ಮನೋದರ್ಮ ಮತ್ತು ಅವರ ಸಾಹಿತ್ಯ ಸ್ವರೂಪವನ್ನು ಕುರಿತು ವಿವೇಚಿಸಿ.

**ಪು.ತಿ.ನೋ.**

## ವಿಭಾಗ–ಸಿ

**ಒಂದು ಪ್ರಶ್ನೆಗೆ ಉತ್ತರಿಸಿ:** **(1 X 5=15).**

14. ವಚನಗಳ ಸಾಹಿತ್ಯಕ ಮತ್ತು ಸಾಮಾಜಿಕ ಮಹತ್ವವನ್ನು ವಿವರಿಸಿ.

15. ನವ್ಯಸಾಹಿತ್ಯದ ಹುಟ್ಟು ಮತ್ತು ಬೆಳವಣಿಗೆಯನ್ನು ವಿಶದಪಡಿಸಿ.

**ಒಂದು ಪ್ರಶ್ನೆಗೆ ಉತ್ತರಿಸಿ:** **(1 X 5=15)**

15. "ನವೋದಯ ಸಾಹಿತ್ಯದ ಸ್ವರೂಪವನ್ನು ದೇಶೀಯ ಮತ್ತು ವಿದೇಶೀಯ ಪ್ರೇರಣೆಗಳೆರಡೂ ರೂಪಿಸಿವೆ" – ನಿರೂಪಿಸಿ

16. ದಲಿತ–ಬಂಡಾಯ ಸಾಹಿತ್ಯದ ಹಿನ್ನಲೆ, ಸ್ವರೂಪ ಮತ್ತು ಸಾದನೆಗಳನ್ನು ವಿಶದಪಡಿಸಿ.

---

**MKAN N(P) 05**

**ಪ್ರಥಮ ಎಂ.ಎ. ಪರೀಕ್ಷೆ, ಜನವರಿ\ಫೆಬ್ರವರಿ 2021**

**SLM Scheme**

**ಕನ್ನಡ**

**ಪತ್ರಿಕೆ–5: ಜನಪದ ತತ್ತ್ವಗಳು ಮತ್ತು ಸಾಹಿತ್ಯ**

**ಸಮಯ: 3 ಗಂಟೆಗಳು** **ಗರಿಷ್ಠಾಂಕ: 80**

**ಸೂಚನೆ: ಎಲ್ಲಾ ವಿಭಾಗಗಳಿಗೂ ಉತ್ತರಿಸಿ**

**ವಿಭಾಗ–ಎ**

**ನಾಲ್ಕು ವಿಷಯಗಳಿಗೆ ಟಿಪ್ಪಣಿ ಬರೆಯಿರಿ:** **(4 X 5= 20)**

1. ಹಾ. ಮಾ. ನಾಯಕ

2. ಜನಪದ ಸಾಹಿತ್ಯದ ರೂಪಗಳು

3. ಹಾಸ್ಯ ಕಥೆಗಳು

4. ಆದಾಯ ತೆರಿಗೆ

5. ಕರ್ನಾಟಕ ಜನಪದ ರಂಗಭೂಮಿ

6. ಜಾನಪದ ಅಧ್ಯಯನದ ವೈಜ್ಞಾನಿಕ ದೃಷ್ಠಿ

**ವಿಭಾಗ–ಬಿ**

**ಮೂರು ಪ್ರಶ್ನೆಗಳಿಗೆ ಉತ್ತರಿಸಿ:** **(3 X 10=30)**

7.'ಜನಪದ ಗೀತಾಂಜಲಿ'ಯಲ್ಲಿ ವ್ಯಕ್ತವಾಗಿರುವ ತೌರೂರಪ್ರೇಮ ಒಡಹುಟ್ಟುಗಳ ಸ್ವಾರಸ್ಯವನ್ನುನಿರೂಪಿಸಿ.

8. 'ಸಂಗ್ಯಾ ಬಾಳ್ಯ' ನಾಟಕದಲ್ಲಿ ಅನೈತಿಕ ಪ್ರಣಯದಿಂದಾದ ದುರಂತದ ಸಂಗತಿಗಳನ್ನು ಕುರಿತು ಚರ್ಚಿಸಿ.

**ಪು.ತಿ.ನೋ.**

9. ಜನಪದ ಬೌದ್ಧಿಕ ಪ್ರತಿಭೆ ಒಗಟುಗಳಲ್ಲಿ ಹೇಗೆವ್ಯಕ್ತವಾಗಿದೆ? 'ಸಾವಿರದ ಒಗಟುಗಳು' ಸಂಕಲನದ ಹಿನ್ನಲೆಯಲ್ಲಿ ವಿವರಿಸಿ.

10. ಜನಪದ ಕಥೆಗಳಲ್ಲಿ ಪ್ರತಿನಿಧೀಕರಣಗೊಂಡ ಸಾಂಸ್ಕೃತಿಕ ಅಂಶಗಳ ಅನನ್ಯತೆಯನ್ನು ಕುರಿತು ವಿವೇಚಿಸಿ.

11. ಗಾದೆಗಳ ಸಾಮಾಜಿಕ ಮೌಲ್ಯ ಮತ್ತು ಸಾಹಿತ್ಯ ಸತ್ತ್ವವನ್ನು ಸೋದಾಹರಣವಾಗಿ ವಿವರಿಸಿ.

## ವಿಭಾಗ–ಸಿ

**ಒಂದು ಪ್ರಶ್ನೆಗೆ ಉತ್ತರಿಸಿ:** **(1 X 5=15)**

12. ಜನಪದ ಸಿದ್ಧಾಂತಗಳನ್ನು ವಿದ್ವಾಂಸರ ಅಭಿಪ್ರಾಯಗಳ ಹಿನ್ನಲೆಯಲ್ಲಿ ವಿಶ್ಲೇಷಿಸಿ.

13. ಕರ್ನಾಟಕದಲ್ಲಿ ಜಾನಪದ ಅಧ್ಯಯನ ಬೆಳೆದು ಬಂದ ಬಗೆಯನ್ನು ವಿವೇಚಿಸಿ.

**ಒಂದು ಪ್ರಶ್ನೆಗೆ ಉತ್ತರಿಸಿ:** **(1 X 5=15)**

14. 'ಸಂಗೋಳ್ಳಿ ರಾಯಣ್ಣ ಮತ್ತು ಹಲಗಲಿಯ ಬೇಡರು' ಲಾವಣಿಯಲ್ಲಿ ಕಂಡುಬರುವ ಹೋರಾಟದ ಗುಣವನ್ನು ವಿವರಿಸಿ.

15. ಜನಪದ ಸಾಹಿತ್ಯದ ರೂಪಗಳು ಯಾವುವು? ವಿವರಿಸಿ.

––––